ಆ) ಆ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಶರಣ ಬಸಪ್ಪ ದರ್ಶನಪುರ್ (ಇಂಧನ ರಾಜ್ಯ ಸಚಿವರು):-

ಅ) ಹುದ್ದೆಗಳ ಸಂಖ್ಯೆ 13,013.

ಆ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ:- ಕೆಇಬಿ ಲೈನ್‌ಮೆನ್‌ಗಳು ಕೇಂದ್ರ ಸ್ಥಾನದಲ್ಲಿರದೆ ತೊಂದರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 649 (174)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಲೈನ್‌ಮೆನ್‌ಗಳ ನಿಗದಿಪಡಿಸಿದ ಕೇಂದ್ರ ಸ್ಥಾನದಲ್ಲಿ ಇರದೇ ಇರುವುದರಿಂದ ತೊಂದರೆ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಅವರಿಗೆ ಕೇಂದ್ರ ಸ್ಥಾನದಲ್ಲಿ ಮನೆ ಮಾಡಲು ಆದೇಶ ಮಾಡಲಾಗುವುದೇ?

ಶ್ರೀ ಶರಣ ಬಸಪ್ಪ ದರ್ಶನಪುರ್ (ಇಂಧನ ರಾಜ್ಯ ಸಚಿವರು):-

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಹಿರೇಕೆರೂರು ಉಪ ವಿಭಾಗದ ವ್ಯಾಪ್ತಿಯಲ್ಲಿ ಸಾಮಾನ್ಯವಾಗಿ ಲೈನ್‌ಮನ್‌ಗಳು ನಿಗದಿಪಡಿಸಿದ ಕೇಂದ್ರ ಸ್ಥಾನದಲ್ಲಿ ವಾಸ ಮಾಡುತ್ತಿದ್ದಾರೆ. ಆದರೆ ಕೆಲವೊಮ್ಮೆ ವಾರದ ರಜಾ ದಿನಗಳಲ್ಲಿ ಮತ್ತು ಲೈನ್ ಮನ್‌ಗಳ ಕೊರತೆಯಿಂದಾಗಿ ಕಾರ್ಯಭಾರವು (ವರ್ಕ್‌ಲೋಡ್) ಹೆಚ್ಚಳಗೊಳ್ಳುವುದರಿಂದ, ವಿದ್ಯುತ್ ಬಳಕೆದಾರರ ದೂರುಗಳನ್ನು ಪರಿಹರಿಸುವಲ್ಲಿ ವಿಳಂಬ ಉಂಟಾಗುತ್ತದೆ.

ಆ) ಲೈನ್‌ಮನ್‌ಗಳಿಗೆ ತಮ್ಮ ಕೇಂದ್ರ ಸ್ಥಾನ (ಲೈನ್‌ಮನ್ ಕ್ಯಾಂಪ್)ದಲ್ಲೇ ವಾಸಿಸುವಂತೆ ಮೇಲಿಂದ ಮೇಲೆ ಸೂಚನೆಗಳನ್ನು ನೀಡುತ್ತಲೇ ಇದೆ ಮತ್ತು ಈ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆಯು ಆದೇಶಿಸಲಾಗುತ್ತಿದೆ.

ವಿಷಯ:- ರಾಜ್ಯದಲ್ಲಿ 10 ಅಶ್ವಶಕ್ತಿ ಒಳಗಡೆ ಇರುವ ಪಂಪುಸೆಟ್ಟುಗಳ ವಿವರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 679 (1384)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 10 ಅಶ್ವ ಶಕ್ತಿ ಒಳಗಡೆ ಇರುವ ಪಂಪು ಸೆಟ್ಟುಗಳೆಷ್ಟು? (ಜಿಲ್ಲಾವಾರು ವಿವರ ನೀಡುವುದು).